ಯೋಚನೆಯೇ ಮನೆಯವರಿಗಿಲ್ಲ ಅಂದುಕೊಂಡಿದ್ದರೆ ಹೊಸ ಸುದ್ದಿ ಹೇಳುತ್ತಿದ್ದಾಳೆ,

"ಅಕ್ಕಾ, ನಂಗೆ ಮದುವೆ ಗೊತ್ತಾಯ್ತು".

★★★

'ಪಾಪದ ಹುಡುಗಿ. ಕಂಡವರ ಮನೆಯಲ್ಲಿ ಕೆಲಸ ಮಾಡುತ್ತಲೇ ಅವಳ ಆಯುಷ್ಯ ಸವೆದು ಹೋಗಬೇಕಾ? ಅವಳಿಗೂ ಸಂಸಾರ, ಮನೆಮಠ ಬೇಡವಾ? ನನ್ನ ಸ್ವಾರ್ಥವನ್ನೇ ಮುಂದಿಟ್ಟುಕೊಂಡು ನಾನು ಯೋಚನೆ ಮಾಡುತ್ತಿರುವುದು ತಪ್ಪು, ತಪ್ಪು, ತಪ್ಪು...' ನಮ್ಮ ಮನೆಗೆ ಒಗ್ಗಿ ಹೋಗಿದ್ದವಳ ಕುರಿತು ಕ್ರಮೇಣ ಮನಸ್ಸು ಮೃದುವಾಗತೊಡಗಿತ್ತು. ಮಾನವೀಯ ನೆಲೆಯಲ್ಲಿ ಸ್ಪಂದಿಸತೊಡಗಿತ್ತು. ಮನುಷ್ಯಸ್ವಭಾವ ಅಂದರೇ ಹೀಗಿರಬಹುದಾ? ಸಂಬಂಧಪಟ್ಟ ಯಾವುದೇ ವಿಷಯವಿರಲಿ, ಅದರಿಂದ ತನ್ನ ಸ್ವಾರ್ಥಕ್ಕೆ, ತನ್ನ ಸುಖಕ್ಕೆ ಯಾವ ವಿಧದಲ್ಲಿ ಧಕ್ಕೆಯುಂಟಾಗುತ್ತದೆ ಎನ್ನುವ ಕುರಿತು ಮೊದಲು ಯೋಚಿಸುತ್ತದೆ ಹಾಳು ಮನಸ್ಸು. ಇಷ್ಟಕ್ಕೂ ನಾನು ಒಲ್ಲೆ ಅಂದರೆ ಅವಳ ಮದುವೆ ನಿಂತು ಹೋಗುತ್ತದೆಯಾ? ವಾಸ್ತವವನ್ನು ವಿಶಾಲ ಮನಸ್ಸಿನಿಂದ ಸ್ವೀಕರಿಸಿದರೆ ನನ್ನ ವ್ಯಕ್ತಿತ್ವಕ್ಕೇ ಮೆರುಗು. ಎಂತೆಂತಾ ಆಪ್ತಸಂಬಂಧಗಳೇ ಕಳಚಿಕೊಳ್ಳುವ ಪ್ರಸಂಗಗಳು ಜೀವನದಲ್ಲಿ ಎದುರಾಗುವಾಗ ಕೇವಲ ಒಬ್ಬ ಮನೆಗೆಲಸದಾಕೆಯ ಕುರಿತು ಹಳಹಳಿಸುವುದು ಯಾಕಾಗಿ? ಕ್ರಮೇಣ ಮನಸ್ಸು ತಹಬಂದಿಗೆ ಬಂದಿತ್ತು. ವ್ಯಾವಹಾರಿಕವಾಗಿ ಹೇಳಿದ್ದೆ,

"ಇನ್ಯಾರಾದ್ರೂ ಒಳ್ಳೇ ಕೆಲಸದೋರು ನಿಂಗೆ ಗೊತ್ತಿದ್ರೆ ಹೇಳು, ಆಯ್ತಾ?"

ಹೂಂಗುಟ್ಟಿದ್ದಳು ಕಾಂತಿ.

ತಿಂಗಳು ಕಳೆದರೂ ಮತ್ತೆ ಮದುವೆಯ ಸುದ್ದಿ ಅವಳ ಬಾಯಿಂದ ಬರಲಿಲ್ಲ. 'ಆದಷ್ಟು ಬೇಗ ಮದುವೆ ಮಾಡಿಕೊಡಿ' ಎಂದು ಹುಡುಗನ ಪೈಕಿಯವರು ಹೇಳಿದ್ದರೆಂದು ಇವಳೇ ಅಲ್ಲವಾ ಹೇಳಿದ್ದು? ಕುತೂಹಲದಿಂದ ಕೇಳಿದೆ,

"ಏನೇ ಮದುಮಗಳೇ? ಯಾವತ್ತೇ ನಿನ್ನ ಮದುವೆ?"

"ಭಾನುವಾರ ಹೂ ಮುಡಿಸೋಕೆ ಬರ್ತಾರೆ..." ನೆಲ ವರೆಸುತ್ತಲೇ ಹೇಳಿದ್ದಳು ಕಾಂತಿ.

"ಅಂದರೆ? ನಿಶ್ಚಿತಾರ್ಥ?"

"ಹೂಂ ಅಕ್ಕಾ..."

"ಹಾಗಿದ್ರೆ ಅವತ್ತು ನೀನು ಕೆಲಸಕ್ಕೆ ಚಕ್ಕರ್?"

"ಹೂಂ ಮತ್ತೆ..." ಅಂದಳು ಕಾಂತಿ.

ಹೇಳಿದಂತೆ ಆ ಭಾನುವಾರ ಕೆಲಸಕ್ಕೆ ಬರಲಿಲ್ಲ ಕಾಂತಿ. ಇನ್ನು ಇವಳನ್ನು ನೆಚ್ಚಿಕೊಳ್ಳದೆ ಹೊಸಬರನ್ನು ಹುಡುಕಿಕೊಳ್ಳಬೇಕಾದ್ದು ಅನಿವಾರ್ಯ. ಯಾರಿಗೆ ಗೊತ್ತು? ನಿಶ್ಚಿತಾರ್ಥ ಆಗಿರುವ ಹುಡುಗಿಯನ್ನು ಮನೆಯವರು ಕೆಲಸಕ್ಕೆ ಕಳಿಸಲಿಕ್ಕೂ ಇಲ್ಲ. 'ನಾಲ್ಕು ದಿನ ಸುಖವಾಗಿರಲಿ' ಎಂದು ಮನೆಯಲ್ಲಿ ಕೂರಿಸಿಕೊಂಡರೆ ಆಶ್ಚರ್ಯವಿಲ್ಲ. ಹೊಂದುವಂತಾ ಕೆಲಸದವಳು ಸಿಗುವವರೆಗೆ ನಾನು ರಟ್ಟೆ ನೋಯಿಸಿಕೊಳ್ಳಬೇಕಾದ್ದು ತಪ್ಪಿದ್ದಲ್ಲ. ಮನಸ್ಸಿನೊಳಗೆ ಏನೋ ಆತಂಕ, ಕಳವಳ. ಯಾವಾಗಿನಂತಾಗಿದ್ದರೆ ಕಾಂತಿ ಒಂದು ದಿನ ಕೆಲಸಕ್ಕೆ ಬರದಿದ್ದರೆ ಅವಳು ಮಾಡುತ್ತಿದ್ದ ಯಾವ ಕೆಲಸಗಳಿಗೂ ಕೈ ಹಚ್ಚದೆ ಅಲ್ಲಲ್ಲಿಯೇ ಬಿಟ್ಟಿರುತ್ತಿದ್ದ ಪೈಕಿ ನಾನು. ದ್ವಿಗುಣವಾಗಿರುತ್ತಿದ್ದ ಪಾತ್ರೆ, ಬಟ್ಟೆಗಳನ್ನು ನೋಡಿ ಕಾಂತಿ ಕೆಲಸಕ್ಕೆ ತಪ್ಪಿಸಿಕೊಳ್ಳುವುದನ್ನು ಕಡಿಮೆ ಮಾಡಲಿ ಎನ್ನುವ ಒಳ ಉದ್ದೇಶವಲ್ಲದೆ 'ಕೊಡುವುದಿಲ್ಲವೇ ದುಡ್ಡು?' ಎನ್ನುವ ಅಸಹನೆಯೂ ಸೇರಿಕೊಂಡಿರುತ್ತಿತ್ತು. ಆದರೆ 'ಹೂ ಮುಡಿಸಿಕೊಳ್ಳಲಿರುವ' ಮದುಮಗಳಾದ ಕಾಂತಿ ಮತ್ತೆ ಕೆಲಸಕ್ಕೆ ಬಂದುಬಿಡುತ್ತಾಳೆನ್ನುವ